ಓ.ಎಸ್.56/2023 ಡಿ.ಡಬ್ಲು-1
*ಶಕುಂತಲಾ ಗಂಡ ಮಹಾಬಳೇಶ್ವರ*

ದಿ. 26-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

***ಮುಂದುವರೆದ ಮುಖ್ಯ ವಿಚಾರಣೆ: ಶ್ರೀ ಆರ್.ಎಮ್.ವೈ ವಕೀಲರಿಂದ :-***

ಕೆರೂಡಿ ಆಸ್ಪತ್ರೆಯವರು ನೀಡಿದ ಪ್ರಮಾಣ ಪತ್ರದ ದೃಡಿಕೃತ ನಕಲನ್ನು ವಾದಿ ಪರ ವಕೀಲರ ಆಕ್ಷೇಪಣೆ ಮೇರೆಗೆ ನಿ.ಡಿ-2 ಎಂದು, ರೇಡಿಯೇಷನ್ ತೆರಪಿ ಚಾರ್ಟ ದೃಡಿಕೃತ ನಕಲನ್ನು ನಿ.ಡಿ-3 ಎಂದು, ಡಿಸ್ ಚಾರ್ಜ್ ಸಮರಿಯ ದೃಡಿಕೃತ ನಕಲನ್ನು ನಿ.ಡಿ-4 ಎಂದು, ಕೀಮೋತೆರಪಿಯ ದೃಡಿಕೃತ ನಕಲನ್ನು ನಿ.ಡಿ-5 ಎಂದು, ಲ್ಯಾಬೋರೋಟರಿ ವರದಿಯ ದೃಡಿಕೃತ ನಕಲನ್ನು ನಿ.ಡಿ-6 ಎಂದು, ಸಿ.ಟಿ.ನೆಕ್ ವರದಿಯ ದೃಡಿಕೃತ ನಕಲನ್ನು ನಿ.ಡಿ-7 ಎಂದು, ಸಿ.ಟಿ.ಸ್ಕ್ಯಾನ್ ವರದಿಯ ದೃಡಿಕೃತ ನಕಲನ್ನು ನಿ.ಡಿ-8 ಎಂದು ಗುರುತಿಸಲಾಯಿತು. ಮಂಜುನಾಥ ಸ್ವ-ಸಹಾಯ ಗುಂಪಿನ ಸ್ಟೇಟಮೆಂಟನ್ನು ವಾದಿ ಪರ ವಕೀಲರ ಆಕ್ಷೇಪಣೆ ಮೇರೆಗೆ ನಿ.ಡಿ-9 ಎಂದು ಗುರುತಿಸಲಾಯಿತು. ಹೊನ್ನಳ್ಳಿ ಗ್ರಾಮದ ಸರ್ವೆ ನಂ.35 ರ 2022-2023 ನೇ ಸಾಲಿನ ಪಹಣಿ ಪತ್ರಿಕೆಯ ದೃಡಿಕೃತ ನಕಲನ್ನು ನಿ.ಡಿ-10 ಎಂದು, ಎಮ್.ಆರ್.ಟಿ-41 ರ ದೃಡಿಕೃತ ನಕಲನ್ನು ನಿ.ಡಿ-11 ಎಂದು, ಹೊನ್ನಳ್ಳಿ ಗ್ರಾಮದ ಸರ್ವೆ ನಂ.35 ರ 2024-2025 ನೇ ಸಾಲಿನ ಪಹಣಿ ಪತ್ರಿಕೆಯ ದೃಡಿಕೃತ ನಕಲನ್ನು ನಿ.ಡಿ-12 ಎಂದು, ಹೊನ್ನಳ್ಳಿ ಗ್ರಾಮದ ಸರ್ವೆ ನಂ.35 ರ 2019-2020 ನೇ ಸಾಲಿನ ಪಹಣಿ ಪತ್ರಿಕೆಯ ದೃಡಿಕೃತ ನಕಲನ್ನು ನಿ.ಡಿ-13 ಎಂದು, ಹೊನ್ನಳ್ಳಿ ಗ್ರಾಮದ ಸರ್ವೆ ನಂ.35 ರ 1993-1994 ರಿಂದ 1997-1998 ನೇ ಸಾಲಿನ ಪಹಣಿ ಪತ್ರಿಕೆಗಳ ದೃಡಿಕೃತ ನಕಲುಗಳನ್ನು ಒಟ್ಟಾಗಿ ನಿ.ಡಿ-14 ಎಂದು, ಮುಟೆಷನ್ ಎಮ್.ಆರ್.ನಂ.20 ರ ದೃಡಿಕೃತ ನಕಲನ್ನು ನಿ.ಡಿ-15 ಎಂದು ಗುರುತಿಸಲಾಯಿತು. ರಾಜೇಶ್ವರ ಸಂಘದ ಅಕೌಂಟ್ ಸ್ಟೇಟಮೆಂಟನ್ನು ವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ನಿ.ಡಿ-16 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಶ್ರೀ ವಿ.ಪಿ.ಎಸ್.ಜೆ ವಕೀಲರಿಂದ:-**

ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.